<u>ಸಿ.ಸಿ .ನಂ. 65/2022</u>                              <u>ಪಿಡಬ್ಲೂಃ 1</u>

<u>ದಿನಾಂಕಃ 10-04-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.</u>

**<u>ಮುಂದುವರೆದ ಪಾಟೀ ಸವಾಲುಃ ಆರೋಪಿಯ ಪರವಾಗಿಃ ಶ್ರೀ ಎಸ್ ಆರ್ ಎಸ್ ವಕೀಲರಿಂದಃ</u>**

10. ನಾನು ಹಾಜರು ಪಡಿಸಿದ ಇನಕಮ್ ಟ್ಯಾಕ್ಸ ರಿಟರ್ನ್ಸ್ ನಲ್ಲಿ ಆರೋಪಿಗೆ ನಿರ್ದಿಷ್ಟವಾಗಿ ಇಂತಿಷ್ಟು ಹಣವನ್ನು ನೀಡಿದ್ದೇನೆ ಎಂಬ ಮಾಹಿತಿ ಇಲ್ಲ ಎಂದರೆ ಸಾಕ್ಷಿ ಹೆಸರು ಇಲ್ಲ ಆದರೆ ಇಂತಿಷ್ಟು ಹಣ ಬರಬೇಕೆಂದು ಮಾಹಿತಿ ಇದೆ ಎಂದು ನುಡಿದಿರುತ್ತಾರೆ . ಆರೀತಿಯ ಮಾಹಿತಿಯು ಕೂಡ ಸಮೇತ ಇಲ್ಲ ಎಂದರೆ ಸರಿಯಲ್ಲ. ಆರೋಪಿಗೆ ಹಣ ಕೊಡಲು ವಿತ್ ಡ್ರಾ ಮಾಡಿದೆ ಎಂದು ತೋರಿಸಲು ಯಾವುದೇ ರೀತಿಯ ವಿತ್ ಡ್ರಾವಲ್ ಪಾಸ್ ಬುಕ್ ನಲ್ಲಿ ಇಲ್ಲ ಎಂದರೆ ಸಾಕ್ಷಿ ನಾನು ಹಣವನ್ನು ಕ್ಯಾಶ್ ರೂಪದಲ್ಲಿ ಕೊಟ್ಟಿದ್ದೆ ಎಂದು ನುಡಿದಿರುತ್ತಾರೆ . ನಾನು ಆರೋಪಿಗೆ ಯಾವುದೇ ಹಣವನ್ನು ಕೊಡದೇ ಇದ್ದುದರಿಂದ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ತೋರಿಸಲು ಆಗುತ್ತಿಲ್ಲ ಎಂದರೆ ಸರಿಯಲ್ಲ. ಆರೋಪಿಗೆ ನೋಟಿಸು ತಲುಪಲಿಲ್ಲ ಎಂದರೆ ಸರಿಯಲ್ಲ . ಅವರು ನೋಟಿಸನ್ನು ತೆಗೆದುಕೊಂಡಿಲ್ಲ. ನಿಪಿ-4 ಅಂಚೆ ಲಕೋಟೆಯ ಹಿಂಬದಿಯಲ್ಲಿ ಹಾಗೂ ಅಂಚೆಯ ಲಕೋಟೆಯ ಮೇಲೆ ನಾಟ್ ಕ್ಲಿಯರ್ ರಿಟರ್ನ ಟು ಸೆಂಡರ್ ಎಂದು ಬರೆದಿದೆ ಎಂದರೆ ಗೊತ್ತಿಲ್ಲ . ನಾಟ್ ಕ್ಲೇಮ್ಡ ಎಂದು ಈ ಪ್ರಕರಣಕ್ಕೆ ಬೇಕಾದಂತೆ ನಾವೇ ಬರೆದುಕೊಂಡಿದ್ದೇವೆ ಎಂದರೆ ಸರಿಯಲ್ಲ. ಆರೋಪಿಗೆ ನೋಟಿಸು ತಲುಪದೇ ಇರುವುದರಿಂದ ಆರೋಪಿಗೆ ಉತ್ತರವನ್ನು ಕೊಡಲು ಸಾಧ್ಯವಾಗಲಿಲ್ಲ ಎಂದರೆ ಸಾಕ್ಷಿ ನೋಟಿಸನ್ನು ಅವರು ತೆಗೆದುಕೊಳ್ಳಲಿಲ್ಲ ಎಂದು ನುಡಿದಿರುತ್ತಾರೆ . ನಾನು ಹಾಜರು ಪಡಿಸಿದ ದಾಖಲಾತಿಗೂ ಈ ವ್ಯವಹಾರಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸಾಕ್ಷಿ ನಾನು ಕ್ಯಾಶ್ ಕೊಟ್ಟಿದ್ದೇನೆ ಎಂದು ನುಡಿದಿರುತ್ತಾರೆ . ನಾನು ಕ್ಯಾಶ ರೂಪದಲ್ಲಾಲೀ, ನೆಟ್ಟ ರೂಪದಲ್ಲಾಗಲೀ ಹಣವನ್ನು ಆರೋಪಿಗೆ ಪಾವತಿಸಲಿಲ್ಲ ಎಂದರೆ ಸಾಕ್ಷಿ ಕ್ಯಾಶ ರೂಪದಲ್ಲಿ ಕೊಟ್ಟಿದ್ದೇನೆ ಎಂದು ನುಡಿದಿರುತ್ತಾರೆ . ಚೆಕ್ ನ ಹಣವನ್ನು ಯಾವುದಾದರೂ ರೀತಿಯಲ್ಲಿ ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಕ್ಯಾಶ್ ರೂಪದಲ್ಲಿ ಇಂತಿಷ್ಟೇ ಹಣ

ಪಿಡಬ್ಲೂಃ 1

ಆರೋಪಿಗೆ ಕೊಟ್ಟಿದ್ದೆನೆಂದು ನಿಖರವಾಗಿ ಇನಕಮ್ ಟ್ಯಾಕ್ಸನಲ್ಲಿ ತೋರಿಸಲು ಆಗುವುದಿಲ್ಲ ಎಂದರೆ ಸಾಕ್ಷಿ ನಗದಾಗಿ ಕೊಟ್ಟಿದ್ದೇನೆ ಎಂದು ನುಡಿದಿರುತ್ತಾರೆ .

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಧಾನ ಪ್ರ.ದ.ನ್ಯಾದಂ., ಕುಮಟಾ.